ಒಎಸ್ ಸಂ.ಃ 84/2012
ಡಿಡಬ್ಲ್ಯೂ ಃ 01
ದಿನಾಂಕ 21-03-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ 2 ರವರ ಪರ ಶ್ರೀ ಕೆಎಂ ವಕೀಲರಿಂದ

ನಾನು ವಾದಿ ಮತ್ತು ಪ್ರತಿವಾದಿ 4 ರವರ ಕುಟುಂಬಕ್ಕೆ ಸೇರಿದವನಲ್ಲ ಎಂದರೆ ಸರಿ. ದಾವಾ ಆಸ್ತಿಗಳನ್ನು ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದು ಹೇಳಲು ನನಗೆ ಮಾಹಿತಿ ಇರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1 ರಿಂದ 4ನೇ ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 4ನೇ ಪ್ರತಿವಾದಿಯಿಂದ ಜಮೀನನ್ನು ಖರೀದಿಸಿದ್ದು ಅದಕ್ಕಾಗಿ ನನ್ನ ಮೇಲೆ ಕೇಸನ್ನು ಹಾಕಿರುತ್ತಾರೆ. ವಾದಿ ಮತ್ತು 1ನೇ ಪ್ರತಿವಾದಿ ಉತ್ತನೂರಿನಲ್ಲಿದ್ದಾರೆ. ಪ್ರತಿವಾದಿ 2 ಮತ್ತು 3 ರವರು ಅಮ್ಮೇರಹಳ್ಳಿಯಲ್ಲಿದ್ದಾರೆ. 4ನೇ ಪ್ರತಿವಾದಿಯು ಅಮ್ಮೇರಹಳ್ಳಿಯಲ್ಲಿ ವಾಸವಾಗಿದ್ದಾರೆ. ಪ್ರತಿವಾದಿ 2 ಮತ್ತು 3 ರವರು ಯಶವಂತಪುರದ ಬೈರಪ್ಪನ ಮಕ್ಕಳು. ಯಶವಂತಪುರದ ಬೈರಪ್ಪನವರು ಅಮ್ಮೇರಹಳ್ಳಿಯಲ್ಲಿ ವಾಸವಾಗಿರಲಿಲ್ಲ. ಅವರು ಉತ್ತನೂರಿನಲ್ಲಿ ವಾಸವಾಗಿದ್ದರು. ವರದಪ್ಪ ಮತ್ತು ಮುನಿಸ್ವಾಮಪ್ಪ ನಮ್ಮ ಊರಿನವರು. ಅವರು ನಮ್ಮ ಊರಿನಲ್ಲಿ ಈಗ ಯಾಕೆ ವಾಸವಾಗಿಲ್ಲ ಎಂದು ನನಗೆ ಗೊತ್ತಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿ 4 ರವರ ಕುಟುಂಬದ ಸಂಬಂಧದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಆದರೆ ಅವರ ಬಗ್ಗೆ ನನಗೆ ಗೊತ್ತಿರುತ್ತದೆ. ಅವರ ಕುಟುಂಬದ ಜಮೀನುಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನಾನು ಖರೀದಿಸಿದ ಆಸ್ತಿಗಳ ಬಗ್ಗೆ ಮಾತ್ರ ನನಗೆ ಮಾಹಿತಿ ಇರುತ್ತದೆ ಉಳಿದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. 4ನೇ ಪ್ರತಿವಾದಿ ನಂಜಮ್ಮನಿಂದ ನಾನು ಆಸ್ತಿಯನ್ನು ಖರೀದಿ ಮಾಡುವ ಮೊದಲು ಅವರ ಹೆಸರಿನಲ್ಲಿ ಖಾತ, ಪಹಣಿ ಇದ್ದು ಅವರಿಗೆ ಅವರ ತಾಯಿ ಲಕ್ಷ್ಮಮ್ಮ ದಾನಪತ್ರ ಬರೆದುಕೊಟ್ಟಿರುತ್ತಾರೆ. ನಂಜಮ್ಮನಿಗೆ ಲಕ್ಷ್ಮಮ್ಮ ದಾನಪತ್ರ ಮಾಡಿಕೊಡಲು ಅಧಿಕಾರವಿದೆಯೋ ಎನ್ನುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ ಸಾಕ್ಷಿ ಮುಂದುವರೆದು ನಂಜಮ್ಮನ ಹೆಸರಿಗೆ ದಾಖಲೆಗಳು ಸರಿಯಾಗಿದ್ದವು ಎಂದು ಹೇಳುತ್ತಾರೆ.

ಐಟಂ ನಂ.6 ಸರ್ವೆ ನಂ.3/7 ರಲ್ಲಿ 1 ಗುಂಟೆ, ಸರ್ವೆ ನಂ.5/4 ರಲ್ಲಿ 3 ಗುಂಟೆ ಆಸ್ತಿಯನ್ನು ನಾನು ಖರೀದಿ ಮಾಡಿರುತ್ತೇನೆ. ಆ ಆಸ್ತಿಗಳು ನಂಜಮ್ಮನ ಮಾಲೀಕತ್ವದ್ದೂ ಅಲ್ಲ

ಮತ್ತು ಅವರ ತಾಯಿ ಲಕ್ಷ್ಮಮ್ಮ ಮಾಲೀಕತ್ವದ್ದೂ ಅಲ್ಲ ನಾನು ಈ ವಿಚಾರವನ್ನು ತಿಳಿದುಕೊಳ್ಳದೇ ಖರೀದಿ ಮಾಡಿ ಎಡವಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಗಳು ವಾದಿಯ ಮೂಲಪುರುಷ ಕುಡುವನಹಳ್ಳಿ ಬೈರಪ್ಪನಿಗೆ ಸೇರಿದ ಬೈರಪ್ಪನಿಗೆ ಸೇರಿದ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಯಶವಂತಪುರ ಬೈರಪ್ಪನನ್ನೇ ಕುಡುವನಹಳ್ಳಿ ಬೈರಪ್ಪ ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ.

ಅಮ್ಮೇರಹಳ್ಳಿ ಲಕ್ಷ್ಮಮ್ಮ ಮತ್ತು ವಾದಿಯ ತಾಯಿ ದೊಡ್ಡಲಕ್ಷ್ಮಮ್ಮ ಅವರ ತಂದೆ ಹೆಸರು ಮುನಿಶಾಮಪ್ಪ, ಮುನಿಶಾಪ್ಪನಿಗೆ ತಮ್ಮನಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಕುಡುವನಹಳ್ಳಿ ಬೈರಪ್ಪನ ಮಕ್ಕಳಾದ ಮುನಿಸ್ವಾಮಪ್ಪ ಮತ್ತು ಮುನಿಯಪ್ಪ ಇವರು ದಿನಾಂಕ 23.12.1968 ರಲ್ಲಿ ಸೆಟಲ್‌ಮೆಂಟ್ ಡೀಡ್ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಓದಿರುವುದಿಲ್ಲ. ಅವರು ಸೆಟಲ್‌ಮೆಂಟ್ ಡೀಡ್ ಮಾಡಿ ಮೂರು ಶೆಡ್ಯೂಲ್ ಮಾಡಿ ಅದರಂತೆ ಹಂಚಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಈ ಸೆಟಲ್‌ಮೆಂಟ್ ಪತ್ರದ ಪ್ರಕಾರ ವಾದಿಯ ತಂದೆ ಯಶವಂತಪುರದ ದೊಡ್ಡಬೈರಪ್ಪನಿಗೆ ಬರೆದಂತಹ 1ನೇ ಶೆಡ್ಯೂಲ್‌ನಲ್ಲಿ ನಾನು 4ನೇ ಪ್ರತಿವಾದಿಯಿಂದ ಖರೀದಿ ಮಾಡಿದ ಆಸ್ತಿಗಳು ಇವೆ ಎಂದರೆ ಸರಿಯಲ್ಲ. ಆ ಎರಡೂ ಆಸ್ತಿಗಳು ವಾದಿಯ ತಂದೆಗೆ ಸೇರಿದ್ದರಿಂದ ಅವು ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ಮುನಿಸ್ವಾಮಪ್ಪ ಅಥವಾ ಮುನಿಯಪ್ಪನಾಗಲೀ ಸೆಟಲ್‌ಮೆಂಟ್‌ಡೀಡ್‌ನ್ನು ರದ್ದುಮಾಡಿಕೊಂಡಿಲ್ಲ ಎಂದರೆ ಎಲ್ಲಾ ವಿಚಾರಗಳು ಸುಳ್ಳು ಎಂದು ಹೇಳುತ್ತಾರೆ.

ನಾನು ಖರೀದಿ ಮಾಡುವ ಮೊದಲು ಇ.ಸಿ ಪಡೆದುಕೊಂಡಲ್ಲಿ ಎಲ್ಲಾ ವಿಚಾರಗಳು ಗೊತ್ತಾಗುತ್ತಿತ್ತು ಎಂದರೆ ಸಾಕ್ಷಿಯು ನಾನು ಇ.ಸಿ ಗಳನ್ನು ಹಾಜರು ಪಡಿಸಿದ್ದೇನೆ ಎಂದು ಹೇಳುತ್ತಾರೆ. ನಿ ಡಿ 2 ನ್ನು ನಾನೇ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದರೆ ಸರಿ. ಕುಡುವನಹಳ್ಳಿ ಬೈರಪ್ಪನ ಮಗ ಮುನಿಯಪ್ಪ ನಂಜಮ್ಮನ ತಾಯಿ ಲಕ್ಷ್ಮಮ್ಮನಿಗೆ ಬರೆದುಕೊಟ್ಟಿದ್ದಾರೆಂದು ನಿ ಡಿ 2 ರಲ್ಲಿ ನಮೂದು ಇದ್ದು ಆ ಆಸ್ತಿಗಳು ಯಾವ ನಾತೆಯಿಂದ ಬಂದಿವೆ ಎಂದು ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ಹೇಳುತ್ತಾರೆ. ನಿ ಡಿ 2 ನ್ನು ಬರೆಯಲು ಮುನಿಯಪ್ಪನಿಗೆ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ. ಪ್ರಮಾಣ ಪತ್ರದಲ್ಲಿನ ವಿಚಾರಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರದಲ್ಲಿ ಹೇಳಿದಂತಹ ಎಲ್ಲಾ ಆಸ್ತಿಗಳಲ್ಲಿ ನಾನು

ಸ್ವಾಧೀನದಲ್ಲಿ ಇರುವುದಿಲ್ಲ ನಾನು ಖರೀದಿ ಮಾಡಿದಂತಹ ಆಸ್ತಿಯಲ್ಲಿ ಮಾತ್ರ ನಾನು ಸ್ವಾದೀನದಲ್ಲಿದ್ದೇನೆ. ವಾದಿ ಮತ್ತು 1 ರಿಂದ 3ನೇ ಪ್ರತಿವಾದಿಯರಿಗೆ ಮೋಸ ಮಾಡಿ ನಾನು ಕ್ರಯಪತ್ರ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮುನಿಯಪ್ಪನವರು ಲಕ್ಷ್ಮಮ್ಮನವರನ್ನು ಸಾಕಿಕೊಂಡಿದ್ದ ವಿಚಾರ ನನಗೆ ಗೊತ್ತಿರುವುದಿಲ್ಲ. ಯಶವಂತಪುರದ ಬೈರಪ್ಪ ಬೆಂಗಳೂರಿನಿಂದ ಬಂದು ಉತ್ತನೂರು ಮುನಿಶಾಮಪ್ಪನ ದೊಡ್ಡ ಮಗಳನ್ನು ಮದುವೆಯಾಗಿರುತ್ತಾರೆ ಎಂದರೆ ಸರಿ. ಯಶವಂತಪುರದ ದೊಡ್ಡಬೈರಪ್ಪನ ಮೊದಲನೇ ಹೆಂಡತಿಯ ಮರಣದ ನಂತರ ಸುಡದೇನಹಳ್ಳಿಯ ಮುನಿಯಮ್ಮನನ್ನು ಆ ಬೈರಪ್ಪನಿಗೆ ಕೊಟ್ಟು 2ನೇ ಮದುವೆ ಮಾಡಲಾಯಿತು ಎಂದರೆ ಸರಿ. ಆ ಮುನಿಯಮ್ಮನಿಗೆ ಗೌರಮ್ಮ ಎನ್ನುವ ಮಗಳಿದ್ದಳು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಯಶವಂತಪುರದ ದೊಡ್ಡಬೈರಪ್ಪನ ಮೊದಲನೇ ಹೆಂಡತಿಯ ಮಗಳು ಗೌರಮ್ಮ ಎಂದು ಹೇಳುತ್ತಾರೆ. ವಾದಿ, 1 ರಿಂದ 3 ನೇ ಪ್ರತಿವಾದಿಯರು ಯಶವಂತಪುರದ ದೊಡ್ಡಬೈರಪ್ಪನ ಮೊದಲನೇ ಹೆಂಡತಿ ಲಕ್ಷ್ಮಮ್ಮನ ಮಕ್ಕಳಾಗಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು 2ನೇ ಹೆಂಡತಿಯ ಮಕ್ಕಳು ಎಂದು ಹೇಳುತ್ತಾರೆ. ಗೌರಮ್ಮನವರು ಯಶವಂತಪುರದ ದೊಡ್ಡಬೈರಪ್ಪನ 2ನೇ ಹೆಂಡತಿಯ ಮುನಿಯಮ್ಮನ ಮಗಳಾಗಿದ್ದರೂ ಕೂಡ ನಾನು 1ನೇ ಹೆಂಡತಿಯ ಮಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ. ಇದೆ

(ಸುಜಾತ ಸುವರ್ಣ.ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮುಳಬಾಗಿಲು.